# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪ್ರೌಢಿಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2547 / ಶ್ರೀ ಪ್ಲವ ನಾಮ ಸಂವತ್ಸರ

ಪುಟ : ೪ ಸಂಪುಟ : ೬೮ ಸಂಚಿಕೆ : ೦೧

15-10-2021 ಅಶ್ವಯುಜ ಮಾಸ : ಶುಕ್ಲ ಪಕ್ಷ ಶುಕ್ರವಾರ

RM No. 13248/57-POSTEL REGD No. KA/SK/SMG 198/2021-23

ಪರಮ ಸಂರಕ್ಷಕರು, ಸಾಹಿತಿ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತೀ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

ಶುಭಾಶೀರ್ವಚನ

ಶ್ರೀ ಕ್ಷೇತ್ರ ಹೊಂಬುಜ

## "ಬಾಳು ದೀಪಾವಳಿಯಾಗಿರುವ ಕಾರಣಗಳು"

ಒಂದು ಊರಿನಲ್ಲಿ ಒಬ್ಬ ಅತೃಪ್ತ ವ್ಯಕ್ತಿ ಇದ್ದ. ಆತ ಏನು ಮಾಡಲು ಹೋದರೂ ಆ ಕೆಲಸ ಆಗುತ್ತಿರಲಿಲ್ಲ. ಆತನು ಬೇರೆಯವರ ಏಳಿಗೆ ಕಂಡರೂ ಅಸೂಯೆ ಪಡುತ್ತಿದ್ದ. ಬೇರೆಯವರ ಸಂತೋಷ ನೋಡಿ ಅವರನ್ನು ದ್ವೇಷಿಸುವುದು, ಹೀಯಾಳಿಸುವುದು ಮಾಡುತ್ತಿದ್ದ. ಇದರಿಂದ ಆ ಊರಿನ ಜನ ಅವನನ್ನು ಕಂಡರೆ ದೂರ ಹೋಗುತ್ತಿದ್ದರು.

ಒಂದು ದಿನ ಆ ವ್ಯಕ್ತಿಯ ಬಗ್ಗೆ ಒಂದು ಸುದ್ದಿ ಹರಡಿತು. ಆತ ಈಗ ಸಂತೋಷದಿಂದ ಓಡಾಡುತ್ತಿದ್ದಾನೆ ಎಂದು. ಊರಿನ ಜನರು ಎಲ್ಲರೂ ಅವನ ಬಳಿ ಬಂದು ಏನಾಯಿತು ಎಂದು ಕೇಳಿದರು. ಆಗ ಆ ವ್ಯಕ್ತಿ ನಾನು ನನ್ನ ಜೀವನ ಪೂರ್ತಿ ಸಂತೋಷವಾಗಿರಬೇಕೆಂದು ಅದರ ಹಿಂದೆ ಹುಡುಕುತ್ತಾ ಹೋದೆ. ನನಗೆ ಈಗ 80 ವರ್ಷ ಆಗಿದೆ. ಇವತ್ತು ನನಗೆ ಅರ್ಥವಾಗಿದೆ ಅನಿಸಿತು ಸಂತೋಷವೆನ್ನುವುದು ಅದಾಗೆ ಬರುವಂತಹದ್ದು. ಅಂತಹ ಕೆಲಸಗಳನ್ನು ಮಾಡುವುದರಿಂದ ಬರುತ್ತದೆ. ನಾವಾಗೇ ಅದರಿಂದೆ ಹೋದರೆ ಸಿಗುವುದಿಲ್ಲ ಎಂದು ಹೇಳುತ್ತಾನೆ.

ಅಂದರೆ ನಮ್ಮ ಜೀವನದ ಪ್ರತಿಯೊಂದು ಕ್ಷಣಗಳು ಸಂತೋಷದಿಂದಲೇ ಕಳೆಯಬೇಕು. ಆನಂದ ಕ್ಷಣಗಳು ನಮ್ಮದೆ. ನಮ್ಮ ಬಳಿಯೇ ಇರುತ್ತದೆ. ಬೇರೆಯವರ ಸುಖ-ದುಃಖಗಳಿಂದ ನಾವು ಆನಂದ ಅನುಭವಿಸಲು ಸಾಧ್ಯವಿಲ್ಲ.

ಒಂದೂರಲ್ಲಿ ಒಬ್ಬ ಸಂತರ ಬಳಿ ಒಂದೇ ರೀತಿಯ ಸಮಸ್ಯೆಗಳನ್ನು ಪದೇ ಪದೇ ಹೇಳಲು ಬರುತ್ತಿದ್ದರು. ಒಂದು ದಿನ ಆ ಜನರ ಮುಂದೆ ಆ ಸಂತ ಒಂದು ನಗೆ ಚಟಾಕಿ (ಜೋಕ್) ಯನ್ನು ಹೇಳಲು ಎಲ್ಲರೂ ತುಂಬಾ ಖುಷಿಯಾಗುತ್ತಾರೆ. ಸ್ವಲ್ಪ ಸಮಯದ ನಂತರ ಮತ್ತೇ ಅದೇ ಜೋಕನ್ನು ಪುನಃ ಹೇಳುತ್ತಾರೆ. ಆಗ ಸ್ವಲ್ಪ ಜನರು ಮಾತ್ರ ನಕ್ಕರು. ಮತ್ತೆ ಸ್ವಲ್ಪ ಸಮಯದ ನಂತರ ಅದೇ ಜೋಕನ್ನು ಹೇಳಲು ಯಾರು ನಗಲಿಲ್ಲ. ಆಗ ಆ ಸಂತರು ನಕ್ಕು ಅವರಿಗೆ "ನೀವುಗಳು ಒಂದೇ ಜೋಕನ್ನು ಪದೇ ಪದೇ ಕೇಳಿ ನಗಲು ಸಾಧ್ಯವಿಲ್ಲ ಎಂದಾದರೆ, ಒಂದೇ ಸಮಸ್ಯೆಯನ್ನು ಚಿಂತಿಸಿ ಯಾಕೆ ದುಃಖಿಸುತ್ತೀರಿ" ಎಂದು ಹೇಳುತ್ತಾರೆ. ಸಮಸ್ಯೆಗಳ ಬಗ್ಗೆ ಅನೇಕ ಬಾರಿ ಚಿಂತಿಸುವುದರಿಂದ ಸಮಾಧಾನ (ಪರಿಹಾರ) ಸಿಗುವುದಿಲ್ಲ. ಇದರಿಂದ ನಮ್ಮ ಸಮಯ ಮತ್ತು ಶಕ್ತಿ ಹಾಳಾಗುತ್ತದೆ.

ಈ ದೃಷ್ಟಾಂತಗಳ ತಾತ್ಪರ್ಯವಿಷ್ಟೇ, ನಮ್ಮ ಜೀವನದಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ, ಹೋಗುತ್ತವೆ. ನಮ್ಮ ಅಮೂಲ್ಯ ಕ್ಷಣಗಳು ನಮ್ಮ ಪ್ರಗತಿಗಾಗಿ, ಉನ್ನತಿಗಾಗಿ ಬಳಕೆಯಾದಾಗಲೇ ಜೀವನ ಬೆಳಗುತ್ತದೆ. ಎಣ್ಣೆ/ತುಪ್ಪದ ದೀಪಗಳು ಹೊರಗಿನ ಕತ್ತಲೆಯನ್ನು ದೂರಮಾಡಬಹುದು. ಅಂತರಾತ್ಮನ ಕತ್ತಲೆಯನ್ನು ದೂರಮಾಡಲು ನಮಗೆ ಸಮಯೋಚಿತವಾದ ವಿವೇಕ, ಜಾಗೃತಿ ಅಳವಡಿಸಿಕೊಂಡರೆ ನಮ್ಮ ಬಾಳಲ್ಲಿ ನಿತ್ಯ ದೀಪಾವಳಿ ಸಂಭ್ರಮವಾಗುವುದರಲ್ಲಿ ಸಂದೇಹವಿಲ್ಲ.

ಎಲ್ಲರಿಗೂ ದೀಪಾವಳಿ ಹಬ್ಬ ದೀಪಾವಳಿಯ ಶುಭಾಶಯಗಳು

WWW.HOMBUJAPADMAVATI.ORG

### ಶುಭ ಸಂಕಲ್ಪದೊಂದಿಗೆ ಶರನ್ನವರಾತ್ರಿ ವಿಜಯದಶಮಿ ಉತ್ಸವ

## "ಲೋಕದಲ್ಲಿ ಧರ್ಮ ಪುರುಷಾರ್ಥ ಪಾಲಿಸಿದಲ್ಲಿ ಮೋಕ್ಷಪ್ರಾಪ್ತಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



ಹೊಂಬುಜ : ವಿವಿಧತೆಯಲ್ಲಿ ಏಕತೆ ಕಂಡ ದೇಶ ಭಾರತ. ಸರ್ವಧರ್ಮದ ತತ್ವಸಾರವು ... ಆಚರಿಸುವುದು ಮುಖ್ಯವಾಗಿದೆ. ... ಧರ್ಮಪುರುಷಾರ್ಥ ಪಾಲಿಸಿದಾಗ ಮೋಕ್ಷ ಕಾಣಲು ಸಾಧ್ಯ. ಅನಾದಿಕಾಲದಿಂದ ಮುಕ್ತ

2ನೇ ಪುಟಕ್ಕೆ

### ಶರನ್ನವರಾತ್ರಿ ಶುಕ್ರವಾರದ ವಿಶೇಷ

## "ಸುಖ-ಶಾಂತಿ-ಸಂಮೃದ್ಧಿಗಾಗಿ ಸಹಸ್ರನಾಮ ಪೂಜೆ"



ಹೊಂಬುಜ: ಶರನ್ನವರಾತ್ರಿಯ ಶುಭ ಶುಕ್ರವಾರದಂದು ಮಹಾಮಾತೆ ಪದ್ಮಾವತಿ ಅಮ್ಮನವರಿಗೆ ವಿಶೇಷ ಸಹಸ್ರನಾಮ ಪೂಜೆಯು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಪಾವನ ಸಾನಿಧ್ಯ,

2ನೇ ಪುಟಕ್ಕೆ

## ಶರನ್ನವರಾತ್ರಿಯ ವಿಶೇಷ ಸರಸ್ವತಿ ಪೂಜೆ



ಹೊಂಬುಜ : ಶರನ್ನವರಾತ್ರಿಯ ಶುಭ ದಿನವಾದ ಅ. 10ರ ಭಾನುವಾರದಂದು ಸರಸ್ವತಿ

## ಕ್ಷಮಾವಳಿ ಕಾರ್ಯಕ್ರಮ



ಹುಬ್ಬಳ್ಳಿ : ದಶಲಕ್ಷಣ ಮಹಾಪರ್ವದ ಕ್ಷಮಾವಳಿ ಕಾರ್ಯಕ್ರಮವು ದಕ್ಷಿಣ ಭಾರತ ಜೈನ ಸಭೆಯ ಶಾಖೆ, ದಿಗಂಬರ ಜೈನ ಬೋರ್ಡಿಂಗ್, ಹಳೇ ವಿದ್ಯಾರ್ಥಿಗಳ ಸಂಘ, ಎಸ್.ಎಸ್.ಎಸ್. ಅಕಾಡೆಮಿ, ಬ್ರಾಹ್ಮಿ ಮಹಿಳಾ ಪರಿಷತ್ ಸಂಯುಕ್ತ ಆಶ್ರಯದಲ್ಲಿ ಸೆ. 21ರಂದು ಜ್ಯೋತಿ ಬೆಳಗುವ ಮೂಲಕ ಪ್ರಾರಂಭಗೊಂಡಿತು. ಜಿ.ಜಿ. ಲೋಬೋಗೋಳ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಐ.ಎ.ಎಸ್. ಅಧಿಕಾರಿ ಮಹೇಂದ್ರ ಜಿನಗಾಂವಿಯವರು ಜೈನರಾದ ಕೇವಲ ಡಾಕ್ಟರ್, ಇಂಜಿನಿಯರ್, ಲೆಕ್ಕ ಪರಿಶೋಧಕರಾಗದೇ ಐ.ಎ.ಎಸ್., ಕೆ.ಎ.ಎಸ್. ಗಳಂತಹ ಹುದ್ದೆಗಳನ್ನು ಹೊಂದಬೇಕು. ಜೈನ ಸಮಾಜದಲ್ಲಿ ಇರುವ ಪ್ರತಿಭಾವಂತ ಪ್ರತಿಭೆಗಳ ನೆರವಿಗಾಗಿ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಆರಂಭಿಸಿರುವ ಎಸ್.ಎಸ್.ಎಸ್. ಅಕಾಡೆಮಿಯನ್ನು ಸದ್ಬಳಕೆ ಮಾಡಿಕೊಳ್ಳಿ ಎಂದರು. ಉಪನ್ಯಾಸಕರಾಗಿ ಮುಂಬಯಿಯಿಂದ ನಿವೃತ್ತ ಶಿಕ್ಷಕರಾದ ಮಹಾವೀರ ಬಂಡಾಳೆ, ಜೈನರಾದ ದಶಲಕ್ಷಣ ಪರ್ವದಲ್ಲಿ ಉತ್ತಮ ಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ ಗುಣಗಳನ್ನು ಅಕ್ಷರ ಜೀವನದೊಂದಿಗೆ ರೂಢಿಸಿಕೊಳ್ಳಬೇಕೆಂದು ಈ ಗುಣಗಳ ಸಮ್ಯಕ್ತ್ವ ಬಳಸಬೇಕೆಂದು ವಿಶ್ವದ ಪ್ರಾರ್ಥನೆಯೊಂದಿಗೆ ತಮ್ಮ ಉಪನ್ಯಾಸವನ್ನು ನೀಡಿದರು.

ದಕ್ಷಿಣ ಜೈನ ಸಭಾ ಚೇರಮನ್ ಮಹಾವೀರ ದಾಸೋಗ್ಗೆ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ದತ್ತಾ ಡೋರ್ಲೆ, ಎಸ್.ಎ. ಬೆಳಗಾವಿ ಜಿ.ಜಿ. ಲೋಬೋಗೋಳ ಸುಧಾಕ್ಕಾ ನೈ ಮುತ್ತಿನ ಎಸ್.ಎಸ್. ಪಾಟೀಲ್, ವಿದ್ಯಾಧರ ಸಿ. ಪಾಟೀಲ್, ಆರ್.ಜಿ. ಅಷ್ಟಗಿ, ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಮತ್ತು ಸದಸ್ಯರು ಹುಬ್ಬಳ್ಳಿ ಎಸ್.ಎಸ್.ಎಸ್. ಅಕಾಡೆಮಿ [illegible] ಭಾಗವಹಿಸಿದ್ದರು. ಆರ್.ಜಿ. ತವನಪ್ಪನವರು ಕಾರ್ಯಕ್ರಮವನ್ನು ನಿರೂಪಿಸಿದರು. ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

WWW.HOMBUJAPADMAVATI.ORG




ಅತಿಶಯ ಕ್ಷೇತ್ರ ಹೊಂಬುಜದ ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರ ಬಸದಿಯ ಜೀರ್ಣೋದ್ಧಾರ ಕೈಗೊಳ್ಳಲು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಯವರು ಕಾರ್ತೀಕ ಮಾಸದ ಶುಭದಿನ 19-11-2020ರಂದು ಭೂಮಿಪೂಜೆ ಮಾಡಲಾಗಿದ್ದು, ಪ್ರಸ್ತುತ ಜೀರ್ಣೋದ್ಧಾರ ಕಾರ್ಯವು ಪ್ರಗತಿಯಲ್ಲಿದೆ.

ಅಮ್ಮನವರ ಗರ್ಭಗೃಹದಲ್ಲಿ ಎಂದಿನಂತೆ ಪುರೋಹಿತರಿಂದ ನಿತ್ಯ ಪೂಜೆಗಳು ನಡೆಯುತ್ತಿವೆ. ಭ. ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯಲ್ಲಿ ಎಲ್ಲಾ ಪೂಜೆ, ಆರಾಧನೆಗೆ ಅವಕಾಶ ಕಲ್ಪಿಸಲಾಗಿದೆ. ಬಸದಿಯ ಸಂಪೂರ್ಣ ಶಿಲಾಮಯವಾಗಲಿರುವ ಈ ಮಹಾ ಕಾರ್ಯಕ್ಕೆ ಧರ್ಮಬಾಂಧವರು ಈ ಹಿಂದಿನಂತೆ ತನು-ಮನ-ಧನ ರೂಪದ ಸಹಕಾರ ನೀಡಬೇಕಾಗಿ ಅಪೇಕ್ಷಿಸುತ್ತೇವೆ.

For contact office : 08185-262722, 9481453653, 9449093540, 9481249127. For remittance by NEFT/RTGS : Sri Hombuja Jain Math, Humcha; SB A/c with Karnataka Bank Humcha Branch- A/c No : 3182500101025001 IFSC Code : KARB0000318.

**ಗುರುದೇವ ಪತ್ರಿಕೆಗೆ ಚಂದಾದಾರರಾಗಿ**

## 25ನೇ ವರ್ಷದ ಬೆಳ್ಳಿಹಬ್ಬ ಆಚರಣೆ

ಬಾಹುಬಲಿ ತಾಂತ್ರಿಕ ಮಹಾವಿದ್ಯಾಲಯವು 25ನೇ ವರ್ಷದ ಬೆಳ್ಳಿಹಬ್ಬವನ್ನು ಆಚರಿಸಲಿದ್ದು, ಪ್ರಸಕ್ತ ವರ್ಷದಲ್ಲಿ ಜುಲೈ-ಆಗಸ್ಟ್ 2021ರ ಅಂತಿಮ ವರ್ಷದ ವಿದ್ಯಾರ್ಥಿಗಳು ಶೇ. 93.86% ಫಲಿತಾಂಶವನ್ನು ನೀಡುವುದರ ಮೂಲಕ ಕಾಲೇಜಿಗೆ ಹೆಮ್ಮೆಯನ್ನು ತಂದಿದ್ದಾರೆ.

ಈ ವರ್ಷ ಅಂದರೆ 2020-21ನೇ ಸಾಲಿನಲ್ಲಿ 100+ಕ್ಕೂ ಹೆಚ್ಚಿನವರನ್ನು ಟಾಪ್ ಎಂ.ಎನ್.ಸಿ. ಕಂಪನಿಗಳಲ್ಲಿ ವಾರ್ಷಿಕ 3 ಲಕ್ಷದಿಂದ 25 ಲಕ್ಷದವರೆಗಿನ ಉದ್ಯೋಗಾವಕಾಶಗಳನ್ನು ನೀಡಲಾಗಿದೆ. ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕಾರ್ಯಾಗಾರಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಅವಕಾಶಗಳು ಇವೆ. ಕೋರ್ಸ್‌ಗಳ ವಿವರ : ಮೆಕ್ಯಾನಿಕಲ್ ಇಂಜಿನಿಯರಿಂಗ್, ಸಿವಿಲ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಇನ್‌ಫೋರ್ಮೇಷನ್ ಸೈನ್ಸ್ & ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್.

2021-22 ನೇ ಸಾಲಿನ ಪ್ರವೇಶಾತಿಗಾಗಿ ಸಂಪರ್ಕ : ಡಾ. ಗೋವಿಪ್ಪುಟಿನ ಎಂ. ರಾಮಪ್ಪನವರ್, ಪ್ರಿನ್ಸಿಪಾಲ್ 9448705707, ಶ್ರೀ ಬಾಹುಬಲಿ ಪತ್ತಾರ್, ಸಂಯೋಜಕರು, 8305929192, ಶ್ರೀ ವಿಜ್ಞಾನ್ ಜೈನ್, ಪ್ರವೇಶ ವಿಭಾಗ, 9980665745.

## ಭರತೇಶ ಶಿಕ್ಷಣ ಸಂಸ್ಥೆಗೆ ಆಯ್ಕೆ

ಬೆಳಗಾವಿ : ಇಲ್ಲಿನ ಭರತೇಶ ಶಿಕ್ಷಣ ಸಂಸ್ಥೆಯಲ್ಲಿ ಇತ್ತೀಚೆಗೆ ನಡೆದ 57ನೇ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಸಂಸ್ಥೆಯ ಆಡಳಿತ ಮಂಡಳಿಯನ್ನು ಅವಿರೋಧವಾಗಿ ಆಯ್ಕೆಮಾಡಲಾಯಿತು. ಜಿಲ್ಲಾ ನಿವೃತ್ತ ನ್ಯಾಯಾಧೀಶ, ಕವಿ ಡಾ. ಜಿನದತ್ತ ದೇಸಾಯಿ ಸಂಸ್ಥೆ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಉಪಾಧ್ಯಕ್ಷರಾಗಿ ರಾಜೀವ ದೊಡ್ಡಣ್ಣವರ, ಕೋಶಾಧ್ಯಕ್ಷರಾಗಿ ಭೂಷಣ ಮಿರ್ಜಿ, ಕಾರ್ಯದರ್ಶಿಯಾಗಿ ಶ್ರೀಪಾಲ ಖೇಮಲಾಪುರೆ, ಜಂಟಿ ಕಾರ್ಯದರ್ಶಿಯಾಗಿ ಪ್ರಶಾಂತ ಉಪಾಧ್ಯೆ ಹಾಗೂ ಸದಸ್ಯರಾಗಿ ರಾಜೇಂದ್ರ ರಾಯಗೊಂಡ, ಭರತ ಪಾಟೀಲ, ಅಶೋಕ ಧನವಾಡೆ, ಡಾ. ಸಾವಿತ್ರಿ ದೊಡ್ಡಣ್ಣವರ, ಜಗದೀಶ ಸವದತ್ತಿ, ಹೀರಾಚಂದ ಕಲಮನಿ, ಶರದ ಪಾಟೀಲ, ದೇವೇಂದ್ರ ದೇಸಾಯಿ ಹಾಗೂ ಶಾಶ್ವತ ಸದಸ್ಯರ ನಾಮಕರಣ ವಿಭಾಗದಿಂದ ವಿನೋದ ದೊಡ್ಡಣ್ಣವರ ಮತ್ತು ವಸಂತ ಕೋಡಚವಾಡ ಆಯ್ಕೆಯಾದರು. ನಿಕಟಪೂರ್ವ ಅಧ್ಯಕ್ಷ ಪ್ರಭಂಜನ ಎ. ದೊಡ್ಡಣ್ಣವರ ಅವರನ್ನು ಸನ್ಮಾನ ಮಾಡಲಾಯಿತು. ಸರ್ವಸಾಧಾರಣ ಸಭೆಯ ಸದಸ್ಯರು ಹೊಸದಾಗಿ ಆಯ್ಕೆಯಾದ ಆಡಳಿತ ಮಂಡಳಿಯ ಸದಸ್ಯರನ್ನು ಸ್ವಾಗತಿಸಿದರು. ಪುಣೆಯ ಭಾರತಿ ವಿದ್ಯಾಪೀಠದಿಂದ ಹೋಮಿಯೋಪತಿಯಲ್ಲಿ ಪಿಎಚ್.ಡಿ. ಗಳಿಸಿದ ಭರತೇಶ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕ ಡಾ. ಶ್ವೇತಾ ಉಪಾಧ್ಯೆ ಅವರನ್ನು ಸತ್ಕರಿಸಲಾಯಿತು.

### ರಾಜ್ಯೋತ್ಸವದ ಸಂದೇಶ



ಕರ್ನಾಟಕ ರಾಜ್ಯೋತ್ಸವದ ಆಚರಣೆಯ ಸಂದರ್ಭದಲ್ಲಿ ಕನ್ನಡ ನಾಡು-ನುಡಿ-ನೆಲ-ಜಲ ಪರಿಸರ ರಕ್ಷಣೆಯ ಹೊಣೆಗಾರಿಕೆಯ ಅರಿವು ಮೂಡಿಸಿ, ಮುಂದಿನ ಪೀಳಿಗೆಯವರಿಗೆ ನಾಡಿನ ಧಾರ್ಮಿಕ-ಸಾಂಸ್ಕೃತಿಕ-ಸಾಹಿತ್ಯ-ಐತಿಹಾಸಿಕ-ಶಿಲ್ಪಕಲೆಯ ಮಹತ್ವವನ್ನು ಮನವರಿಕೆ ಮಾಡಬೇಕಿದೆ.

ನಮ್ಮದು ಬೆಳೆ ಬೆಳೆಯುವ, ರೈತರ ಕೃಷಿಭೂಮಿಯ ಸದುಪಯೋಗ ಪಡಿಸಬೇಕು. ಶೈಕ್ಷಣಿಕವಾಗಿ ಕನ್ನಡ ವಿದ್ಯಾವಂತರಾಗಿ ನಾಡಿನ ಅಭ್ಯುದಯಕ್ಕಾಗಿ ಶ್ರಮಿಸಬೇಕು.

ಕರ್ನಾಟಕದ ಆರ್ಥಿಕ ಪ್ರಗತಿಗೆ ಸಹಕರಿಸಿ, ಸಂಪನ್ಮೂಲಗಳನ್ನು ಬಳಸಿ, ರಕ್ಷಿಸಿ ಸಾರ್ವಜನಿಕ ಕಲ್ಯಾಣ ಕಾರ್ಯಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ನಾವೆಲ್ಲರೂ ಪಾಲ್ಗೊಳ್ಳೋಣ.

'ಸಿರಿಗನ್ನಡಂ ಗೆಲ್ಗೆ'

### ಭಕ್ತಾದಿಗಳ ಗಮನಕ್ಕೆ

ಅತಿಶಯ ಕ್ಷೇತ್ರ ಹೊಂಬುಜದ ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರ ಬಸದಿಯ ಜೀರ್ಣೋದ್ಧಾರ ಕಾರ್ಯ ಪ್ರಾರಂಭವಾಗಿದ್ದು, ದರ್ಶನದ ಸಮಯದಲ್ಲಿ ಬದಲಾವಣೆಯಾಗಿದೆ.

**ದರ್ಶನದ ಸಮಯ :**

**ಬೆಳಗ್ಗೆ: 07-00 ರಿಂದ 09.00 ರವರೆಗೆ**

**ಸಂಜೆ: 06-00 ರಿಂದ 08.00ರವರೆಗೆ**

ಶ್ರೀಕ್ಷೇತ್ರದ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಇನ್ನಿತರ ಎಲ್ಲಾ ಬಸದಿಗಳಲ್ಲಿ ಪೂಜಾ ಮತ್ತು ಇತರ ವಿಧಿ-ವಿಧಾನಗಳು ಎಂದಿನಂತೆ ನೆರವೇರಲಿವೆ. ಆರಾಧನೆ, ನಾಮಕರಣ ಇನ್ನಿತರ ಸೇವೆಗಳನ್ನು ಸಲ್ಲಿಸುವವರು ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯಲ್ಲಿ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಧರ್ಮಬಂಧುಗಳು ಸಹಕರಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗಾಗಿ ಶ್ರೀಮಠದ ಕಛೇರಿಯಲ್ಲಿ ಸಂಪರ್ಕಿಸಲು ತಿಳಿಸಿದೆ. ಸಂಪರ್ಕ : ಶ್ರೀ ಸುಧೀರ ಎ. ಕುಸನಾಳೆ ಮೊ: 9243282246.

ಫೋನ್ : 9481453653, 9449093540, 9481249127.

# ಹೊಂಬುಜದಲ್ಲಿ ನವರಾತ್ರಿ-ವಿಜಯದಶಮಿ ಸಂಭ್ರಮ



ಘಟಸ್ಥಾಪನೆಯೊಂದಿಗೆ ಪೂಜ್ಯಶ್ರೀಗಳಿಂದ ನವರಾತ್ರಿ ದಸರಾ ಮಹೋತ್ಸವಕ್ಕೆ ಚಾಲನೆ.



ಸಾಲಂಕೃತ ಶೋಭಾಯಾತ್ರೆಯಲ್ಲಿ ಬನ್ನಿ ಮಂಟಪಕ್ಕೆ ಪಾಲಕಿ ಉತ್ಸವ.



ಪ್ರತಿದಿನ ಸಂಜೆ ನೃತ್ಯವೈಭವ



ಬನ್ನಿ ಮಂಟಪದಲ್ಲಿ ಶ್ರೀಗಳ ಸಾನಿಧ್ಯದಲ್ಲಿ ವಿಶೇಷ ಪೂಜೆ.

WWW.HOMBUJAPADMAVATI.ORG



ಧಾರ್ಮಿಕ ಸಭೆ.



ನವರಾತ್ರಿಯಂದು ಆಗಮಿಸಿದ್ದ ಭಕ್ತಾದಿಗಳಿಗೆ ಭೋಜನ ವ್ಯವಸ್ಥೆ.



ಹೊಂಬುಜದ ಶಾಖಾ ಮಠಗಳಾದ ವರಂಗ ಹಾಗೂ ಹಟ್ಟಿಯಂಗಡಿ ಜೈನ ಮಠಗಳಿಗೆ ವಿಜಯದಶಮಿಯ ಶುಭ ದಿನದಂದು ಉತ್ಸವಗಳಿಗೆ ನೂತನ ಪಲ್ಲಕ್ಕಿ ಸಮರ್ಪಣೆ.

## "ದೀಪ ಬೆಳಗಿಸಿ-ಪರಿಸರ ಉಳಿಸಿ"



ದೀಪಾವಳಿ ಬೆಳಕಿನ ಹಬ್ಬ
ಅಂತರಂಗ-ಬಹಿರಂಗಗಳಲ್ಲಿ ಸುಜ್ಞಾನದ ಜ್ಯೋತಿಯಿರಲಿ,
ಜನ-ಮನಗಳಲ್ಲಿ ಉತ್ಸಾಹ ತುಂಬಿರಲಿ,
ಕಾರ್ಯದಲ್ಲಿ ಯಶಸ್ಸು ಸಿದ್ಧಿಸುವಂತಾಗಲಿ,
ಸುರಕ್ಷತೆಯಿಂದ ಆಚರಿಸಿ,

"ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು"

ಗುರುದೇವ
GURUDEVA MONTHLY
RNI No. 13248/57-POSTEL REGD No. KA/SK/SMG 198/2021-23
Date of Posting 17th of every month. Sub Post office, Humcha - 577436
ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ
ಪ್ರಕಾಶಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಹೊಸನಗರ-ತಾಲ್ಲೂಕು, ಶಿವಮೊಗ್ಗ-577436

Edited, Published & Printed by Sri Sudir A. Kusanale,on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722, 262209